ಕರ್ನಾಟಕ ವಿಧಾನ ಸಭೆ

ಸೋಮವಾರ 22ನೇ ಜುಲೈ 1996ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

(ಪ್ರಶ್ನೋತ್ತರಗಳು)

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ:- ಬಸವಕಲ್ಯಾಣದಲ್ಲಿ ಲೋಕೋಪಯೋಗಿ ಸಬ್ ಡಿವಿಜನ್ ಕಛೇರಿ ಪ್ರಾರಂಭ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 166 (733)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿ ಲೋಕೋಪಯೋಗಿ ಇಲಾಖೆಯ ಸಬ್ ಡಿವಿಜನ್ ಕಛೇರಿಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದವರ ಮುಂದೆ ಇದೆಯೇ?

ಆ) ಇಲ್ಲದಿದ್ದಲ್ಲಿ ಸರ್ಕಾರದವರು 1996-97ನೇ ಸಾಲಿನಲ್ಲಿ ಸದರೀ ಕಛೇರಿಯನ್ನು ತೆರೆಯಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಸಿ.ಎಂ. ಉದಾಸಿ:-

ಅ) ಲೋಕೋಪಯೋಗಿ ಉಪ ವಿಭಾಗ ಬಸವಕಲ್ಯಾಣ ಕಚೇರಿಯು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವುದರಿಂದ ಪುನಃ ಲೋಕೋಪಯೋಗಿ ಉಪ ವಿಭಾಗವನ್ನು ಬಸವಕಲ್ಯಾಣದಲ್ಲಿ ಪ್ರಾರಂಭಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

11.10 ಎ.ಎಂ.

+ಶ್ರೀ ಬಸವರಾಜ ಪಾಟೀಲ್ ಅಟ್ಟೂರ್:- ಸನ್ಮಾನ್ಯ ಅಧ್ಯಕ್ಷರೆ, ಬಸವಕಲ್ಯಾಣದಲ್ಲಿ ಈಗಾಗಲೇ ಒಂದು ಪಿ.ಡಬ್ಲ್ಯೂಡಿ. ಸಬ್ ಡಿವಿಷನ್ ಇರುವುದರಿಂದ ಪುನಃ ಇನ್ನೊಂದು ಸಬ್‌ಡಿವಿಷನ್ ಪ್ರಾರಂಭಿಸುವ ಪ್ರಶ್ನೆ ಇಲ್ಲವೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಕೆಲವು ದಿವಸಗಳ ಹಿಂದೆ ಒಂದು ಮೀಟಿಂಗ್ ಕಂಡಕ್ಟ್ ಮಾಡಿ ಇನ್ನೊಂದು ಸಬ್

ಡಿವಿಷನ್ ತೆರೆಯುವ ಬಗ್ಗೆ ಪ್ರಸ್ತಾವನೆಯನ್ನು ಮುಂದಿಡಲಾಗಿತ್ತು, ಇದಕ್ಕೆ ಕಾರಣವೇನೆಂದರೆ, ನಮ್ಮ ಕ್ಷೇತ್ರ ಗಡಿ ಪ್ರದೇಶವಾಗಿದ್ದು ಅಲ್ಲಿನ ರಸ್ತೆಗಳು ಬಹಳ ಹದಗೆಟ್ಟ ಪರಿಸ್ಥಿತಿಯಲ್ಲಿವೆ. ನಮ್ಮ ನೆರೆ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳು ತಮ್ಮ ಗಡಿ ಪ್ರದೇಶಗಳಲ್ಲಿ ಡಬಲ್ ರೋಡ್ ಮಾಡುವುದರ ಮೂಲಕ ರಸ್ತೆ ಸೌಕರ್ಯವನ್ನು ಉತ್ತಮವಾಗಿ ಕಲ್ಪಿಸಿಕೊಟ್ಟಿದ್ದಾರೆ. ರಸ್ತೆಗಳ ಉತ್ತಮ ನಿರ್ವಹಣೆಗಾಗಿ ಎರಡು ಪಿ.ಡಬ್ಲೂ.ಡಿ. ಸಬ್ ಡಿವಿಷನ್‌ಗಳು ಮಾಡಿದರೆ ಒಳ್ಳೆಯದೆಂದು ನಮ್ಮ ಅಭಿಪ್ರಾಯ. ನಮ್ಮ ಜಿಲ್ಲೆಯ ರಸ್ತೆಗಳು ಬಹಳ ಕೆಟ್ಟಿರುವುದರ ಜೊತೆಗೆ ಅವುಗಳ ಮೇಂಟೆನೆನ್ಸ್ ಕೂಡ ಸರಿಯಾಗಿಲ್ಲವಾದ್ದರಿಂದ ವಾಹನಗಳು ಹೋಗಿ ಬರಲು ಬಹಳ ತೊಂದರೆಯಾಗಿದೆ ಇದರ ಬಗ್ಗೆ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ:- ಸನ್ಮಾನ್ಯ ಸಭಾಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ಈಗಾಗಲೇ 5 ಪಿ.ಡಬ್ಲೂ.ಡಿ ಸಬ್ ಡಿವಿಷನ್ ಇರುವಾಗ ಅದರ ಜೊತೆಗೆ ಇನ್ನೊಂದು ಸಬ್‌ಡಿವಿಜನ್ ತೆರೆಯುವುದು ಎಷ್ಟು ಸಮಂಜಸವೆಂಬ ಪ್ರಶ್ನೆ ನಮ್ಮ ಮುಂದೆ ಇದೆ. ಆದುದರಿಂದ ಸಧ್ಯದಲ್ಲಿ ಇನ್ನೊಂದು ಸಬ್ ಡಿವಿಷನ್ ತೆರೆಯುವ ವಿಚಾರ ಸರ್ಕಾರದ ಮುಂದೆ ಇಲ್ಲ. ಮುಂದೆ ಅಂಥಾ ಅಗತ್ಯ ಬಿದ್ದರೆ ಅದರ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್:- ಮಾನ್ಯ ಅಧ್ಯಕ್ಷರೆ, ರಸ್ತೆಗಳ ಉಸ್ತುವಾರಿ ನೋಡಿಕೊಳ್ಳುವುದಕ್ಕೆ ಗ್ಯಾಂಗ್‌ಮೆನ್‌ಗಳ ಕೊರತೆ ಬಹಳ ಇರುವುದರಿಂದ ರಸ್ತೆ ಮೇನ್‌ಟೆನೆನ್ಸ್ ಬಹಳ ಹದಗೆಟ್ಟುಹೋಗಿದೆ. ಮಹಾರಾಷ್ಟ್ರ ಗಡಿ ಪ್ರದೇಶಗಳಲ್ಲಿ ರಸ್ತೆಗಳು ಉತ್ತಮ ಸ್ಥಿತಿಯಲ್ಲಿರುವಾಗ ನಮ್ಮ ಸರ್ಕಾರವೂ ಅದರ ಬಗ್ಗೆ ಗಮನಹರಿಸಬೇಕು. ಆದುದರಿಂದ ಆದಷ್ಟು ಬೇಗ ಗ್ಯಾಂಗ್‌ಮೆನ್‌ಗಳನ್ನು ನೇಮಕ ಮಾಡಿಕೊಂಡು ರಸ್ತೆ ಸುಧಾರಣೆ ಕಡೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ:- ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿರುವ ರಸ್ತೆಗಳ ಸುಧಾರಣೆಗೆ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗುತ್ತದೆ. ಇದರ ಜೊತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಗ್ಯಾಂಗ್‌ಮೆನ್‌ಗಳನ್ನು ನೇಮಕ ಮಾಡಿಕೊಳ್ಳುವುದಕ್ಕಾಗಿ ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಬಿ.ಆರ್.ಯಾವಗಲ್:- ಮಾನ್ಯ ಅಧ್ಯಕ್ಷರೆ, ಈಗ ನಾನು ಕೇಳುತ್ತಿರುವುದು ನೇರವಾಗಿ ಈ ಪ್ರಶ್ನೆಗೆ ಸಂಬಂಧಪಡದೇ ಇದ್ದರೂ ಕೇಳುತ್ತೇನೆ, ಲೋಕೋಪಯೋಗಿ ಇಲಾಖೆ ವ್ಯಾಪ್ತಿಯೊಳಗಿದ್ದ ಸಬ್ ಡಿವಿಷನ್‌ಗಳಲ್ಲಿ ಸುಮಾರು 50 ಸಬ್ ಡಿವಿಷನ್‌ಗಳನ್ನು ಪ್ರತ್ಯೇಕ ಮಾಡಿ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ಗೆ ವಹಿಸಿಕೊಡುವ ಬಗ್ಗೆ ಸರ್ಕಾರಿ ಆಜ್ಞೆಯಾಗಿತ್ತು, ಆದರೆ, ಅದರ ಬಗ್ಗೆ ಸರ್ಕಾರ ಸಧ್ಯಕ್ಕೆ ತಡೆ ಆಜ್ಞೆ ಕೊಡಲಾಗಿದೆಯೆಂದು ತಿಳಿದು ಬಂದಿದೆ. ಆದುದರಿಂದ ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಸಿ.ಎಂ.ಉದಾಸಿ:- ಮಾನ್ಯ ಸಭಾಧ್ಯಕ್ಷರೆ, ಈ ಬಗ್ಗೆ ಪಕ್ಷ ಬೇಧ ಮರೆತು ಆಕ್ಷೇಪವನ್ನು ವ್ಯಕ್ತಪಡಿಸಿದ ಸದಸ್ಯರುಗಳನ್ನೆಲ್ಲಾ ಕರೆದು ಅವರ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ. ಇದರ ಬಗ್ಗೆ ಇನ್ನು ಎರಡು ಮೂರು ದಿವಸಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ನೀರಾವರಿ ಸಚಿವರ ಜೊತೆಗೆ ಸಮಾಲೋಚನೆ ಮಾಡಿ ಒಂದು ತೀರ್ಮಾನವನ್ನು ತೆಗೆದು ಕೊಳ್ಳಲಾಗುವುದೆಂದು ತಿಳಿಸುತ್ತೇನೆ.

ವಿಷಯ:- 1995-96ನೇ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಯಕ್ಷಗಾನ ಕಲಾವಿದರನ್ನು ಕೈ ಬಿಟ್ಟಿರುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 167 (957)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಪ್ರವಾಸೋದ್ಯಮ ಮತ್ತು ಕನ್ನಡ ಹಾಗೂ ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕನ್ನಡ ರಾಜ್ಯೋತ್ಸವದಲ್ಲಿ ಕಳೆದ ಬಾರಿ ಪ್ರಶಸ್ತಿಗೆ ಆಯ್ಕೆ ಮಾಡುವಲ್ಲಿ ಯಕ್ಷಗಾನ ಕಲಾವಿದರನ್ನು ಕೈಬಿಡಲಾಗಿದೆಯೇ? ಬಿಡಲಾಗಿದ್ದರೆ ಅದಕ್ಕೆ ಅರ್ಹ ಕಲಾವಿದರ ಅಭಾವ ಕಾರಣವೇ ಅಥವಾ ಸರ್ಕಾರದ ನೀತಿ ಕಾರಣವೇ?

ಆ) ರಾಜ್ಯೋತ್ಸವದ ಪ್ರಶಸ್ತಿಗೆ ಕಲಾವಿದರ ಆಯ್ಕೆಗೆ ಸರ್ಕಾರದ ಮಾನದಂಡವೇನು?

ಶೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ ಮತ್ತು ಕನ್ನಡ ಹಾಗೂ ಸಂಸ್ಕೃತಿ ರಾಜ್ಯ ಸಚಿವರು):-

ಅ) 1995-96ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ಯಕ್ಷಗಾನ ಕಲಾವಿದರು ಆಯ್ಕೆಯಾಗಿರುವುದಿಲ್ಲ. ಸಲಹಾ ಸಮಿತಿಯ ಶಿಫಾರಸು ಮತ್ತು ಸರ್ಕಾರದ ತೀರ್ಮಾನದಂತೆ ಅರ್ಹ ಮಹನೀಯರನ್ನು ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಆ) ರಾಜ್ಯೋತ್ಸವ ಪ್ರಶಸ್ತಿಗಾಗಿ ಅರ್ಹ ವ್ಯಕ್ತಿಗಳನ್ನು ಆಯ್ಕೆ ಮಾಡಲು ಸರ್ಕಾರವು ನೇಮಕ ಮಾಡುವ ಸಲಹಾ ಸಮಿತಿಯ ಶಿಫಾರಸು, ಆದರೆ ಆಯ್ಕೆಯ ಅಂತಿಮ ನಿರ್ಧಾರ ಸರ್ಕಾರದ್ದಾಗಿರುತ್ತದೆ.

+ಶ್ರೀ ಕುಂಬ್ಳೆ ಸುಂದರರಾವ್:- ಸನ್ಮಾನ್ಯ ಅಧ್ಯಕ್ಷರೆ, ಕನ್ನಡ ರಾಜ್ಯೋತ್ಸವದಲ್ಲಿ ಕಳೆದ ಬಾರಿಯ ಪ್ರಶಸ್ತಿಗೆ ಯಕ್ಷಗಾನ ಕಲಾವಿದರನ್ನು ಏಕೆ ಆಯ್ಕೆ ಮಾಡಿಲ್ಲವೆಂದು ಕೇಳಿದ್ದಕ್ಕೆ ಒಂದು ಕಡೆ ಆಗಿಲ್ಲವೆಂದೂ ಹೇಳುತ್ತಾರೆ, ಇನ್ನೊಂದು ಕಡೆ ಅರ್ಹ ಕಲಾವಿದರನ್ನು ಸರ್ಕಾರದ ತೀರ್ಮಾನದಂತೆ ಆಯ್ಕೆ ಮಾಡಲಾಗಿದೆಯೆಂತಲೂ ಹೇಳಿದ್ದಾರೆ.. ಇದರ ಅರ್ಥ ಏನೆಂಬುದು ನನಗೆ ಗೊತ್ತಾಗಲಿಲ್ಲ. 'ಯಕ್ಷಗಾನಕ್ಕೆ ಅರ್ಹತೆ ಇಲ್ಲವೆಂದು ಅರ್ಥವೇ ಅಥವಾ ಸಮಿತಿಗೆ ಯಕ್ಷಗಾನ ಕಲಾವಿದರನ್ನು ಆಯ್ಕೆ ಮಾಡಲು ಅರ್ಹತೆ ಇಲ್ಲ ಎಂದೇ? ಎರಡನೆಯ ಪ್ರಶ್ನೆಯಲ್ಲಿ ಕಲಾವಿದರನ್ನು ಆಯ್ಕೆ ಮಾಡುವ ಮಾನದಂಡ 'ಎನು